# ಮಾತೃಸ್ಮೃತಿ

ಮೂಲ ಬಂಗಾಳಿ : **ಲಾವಣ್ಯಕುಮಾರ್ ಚಕ್ರವರ್ತಿ**

ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

## ಭಾಗ ೧

ಎಷ್ಟು ಗುಪ್ತವೋ ಅಷ್ಟೇ ವ್ಯಕ್ತ – ಜಗನ್ಮಾತೆ ಶ್ರೀಶಾರದಾ ದೇವಿಯವರ ಜೀವನ ಅಸಾಧಾರಣ ಲಜ್ಜಾವತಿಯಾದ ಮನೆಯ ಕೋಣೆಯೊಳಗಿನ ಕುಲವಧುವಿನಂತೆ, ಮಹಾಮಾಯೆ ತಾವೇ ತಮ್ಮ ಮೇಲೆ ಮಾಯೆಯ ಮುಸುಕು ಹಾಕಿಕೊಂಡುಬಿಟ್ಟಿದ್ದರು. ಶ್ರೀರಾಮಕೃಷ್ಣ-ಶಾರದೆಯರೆಂದರೆ ಬ್ರಹ್ಮ-ಶಕ್ತಿ, ನರ-ನಾರಿ, ದೇಹಧಾರಿ-ದೇಹಧಾರಿಣಿಯರು. ಶ್ರೀರಾಮಕೃಷ್ಣ ಪರಮ ಹಂಸ ದೇವರ ಜೀವನದಲ್ಲಿ ಅಪೂರ್ವ, ಅನಂತ ಭಾವದ ವಿಕಾಸ ಹಾಗೂ ವಿಲಾಸ ವ್ಯಕ್ತಗೊಂಡುದು ಅವರ ಪಾರ್ಷದರ ಹಾಗೂ ಮುಮುಕ್ಷುಗಳಾದ ಸಂದರ್ಶಕರ ಅರಿವಿಗೆ ಹೆಚ್ಚುಕಡಿಮೆ ಬಂದಿತ್ತು; ಆದರೆ ಮಹಾಶಕ್ತಿಯೂ ಬ್ರಹ್ಮಮಯಿಯೂ ಆದ ಶ್ರೀಮಾತೆ ಯವರಲ್ಲಿ ಉಂಟಾದ ಭಾವವಿಕಾಸ ಹಾಗೂ ವಿಲಾಸಗಳು ಸಾಧಾರಣ ವ್ಯಕ್ತಿಗಳ ಪಾಲಿಗೆ ಅತ್ಯಲ್ಪ ಮಾತ್ರವೇ ಗೋಚರ ವಾಯಿತು. ಅವರು ಅಷ್ಟೊಂದು ಗುಪ್ತವಾಗಿ, ಗಭೀರವಾಗಿ ದ್ದರು! ಶ್ರೀರಾಮಕೃಷ್ಣರ ಪಾರ್ಷದರಿಗೆ (ಅವರ ಲೀಲಾಸಹಾ ಯಕರಾದ ಅಂತರಂಗ ಭಕ್ತರು) ಶ್ರೀಮಾತೆಯವರ ಬಗ್ಗೆ ಮುಮುಕ್ಷುಗಳಾದ ಭಕ್ತರು ಏನನ್ನಾದರೂ ಕೇಳಿದಾಗ, ಅವರು ಏನನ್ನೂ ಹೇಳಬಯಸುತ್ತಿರಲಿಲ್ಲ. ಪೂಜ್ಯಪಾದ ಸ್ವಾಮಿ ಪ್ರೇಮಾ ನಂದರು ಹೇಳುತ್ತಿದ್ದರು: ''ಶ್ರೀಮಾತೆಯವರನ್ನು ಯಾರು ಅರಿತುಕೊಂಡಿದ್ದಾರೆ? ಯಾರು ಅರ್ಥಮಾಡಿಕೊಂಡಿದ್ದಾರೆ?'' ಅಷ್ಟಕ್ಕೆ ಮಾತನ್ನು ಮುಗಿಸಿ, 'ಜೈ ಮಾ, ಜೈ ಮಾ' ಎನ್ನುತ್ತಿದ್ದರು. ಅವರ ಬಾಯಿಯಿಂದಲೇ ನಾನು ಕೇಳಿದ್ದೇನೆ, ಶ್ರೀರಾಮಕೃಷ್ಣರ ಭಾವಗಳ ಮೂರ್ತರೂಪರೂ, ವೇದಾಂತದ ಮೂರ್ತರೂಪರೂ, ಪ್ರಧಾನ ಭಾವಪ್ರಸರಣಗಾರರೂ ಆದ ಪೂಜ್ಯಪಾದ ಸ್ವಾಮೀಜಿ ಯವರು ಒಂದು ಸಲ ಶ್ರೀಮಾತೆಯವರನ್ನು ಭೇಟಿ ಮಾಡಲು ಬೇಲೂರು ಮಠದಿಂದ ಬಾಗ್‌ಬಜಾರಿಗೆ ಹೋಗುತ್ತಿದ್ದರು. ಜೊತೆಗೆ ಅವರ ಗುರುಭ್ರಾತೃವಾದ ಸ್ವಾಮಿ ತುರೀಯಾನಂದರೂ ಇದ್ದರು. ಅವರು ದೋಣಿಯಲ್ಲಿ ಪ್ರಯಾಣ ಮಾಡುತ್ತಿದ್ದರು. ಆಗ ಮಳೆಗಾಲ. ಗಂಗಾನದಿಯಲ್ಲಿ ಮಣ್ಣುಮಿಶ್ರಿತವಾದ ನೆರೆಯ ನೀರು ಎರಡೂ ದಡಗಳನ್ನು ಉಕ್ಕಿ ಹರಿಯುತ್ತಿತ್ತು. ಆಗ ಸ್ವಾಮೀಜಿಯವರ ದೇಹಾರೋಗ್ಯ ಚೆನ್ನಾಗಿರಲಿಲ್ಲ. ೧೦೨ ಡಿಗ್ರಿ ಯಷ್ಟು ಜ್ವರ. ಆ ಕೂಡಲೇ ತುರೀಯಾನಂದಜಿ ಮಹಾರಾಜ್ ನೋಡಿದರು – ಸ್ವಾಮೀಜಿ ಗಂಗೆಯ ಅದೇ ಮಣ್ಣುಮಿಶ್ರಿತ ನೀರನ್ನು ಬೊಗಸೆಯಲ್ಲಿ ತುಂಬಿ ಕುಡಿಯುತ್ತಿದ್ದಾರೆ! ಅದನ್ನು



ತಲೆಗೂ ಹಾಕಿಕೊಂಡರು. ಅವರು ಹೀಗೆ ಮಾಡಿದರೆ ಅವರ ಅನಾರೋಗ್ಯ ಇನ್ನಷ್ಟು ಅಧಿಕವಾದೀತೆಂದು ತುರೀಯಾನಂದರು ಅವರಿಗೆ ಹೇಳಿದರು. ಆಗ ಸ್ವಾಮೀಜಿ, ''ನಾನು ಶ್ರೀಮಾತೆ ಯವರ ಬಳಿಗೆ ಹೋಗುತ್ತಿದ್ದೇನೆ. ನನಗೇನು ಗೊತ್ತು, ನನ್ನ ದೇಹ-ಪ್ರಾಣಗಳಲ್ಲಿ ಎಲ್ಲಾದರೂ ಅಪವಿತ್ರತೆ ನುಸುಳಿಬಿಟ್ಟಿದ್ದರೆ, ಅದರಿಂದ ಸರ್ವನಾಶವಾದಂತೆ, ತಮ್ಮಾ! ಅದಕ್ಕಾಗಿ ನನಗೆ ಇಷ್ಟೊಂದು ಭಯ!'' ಎಂದರು.

ಸ್ವಾಮೀಜಿಯವರ ಈ ಮಾತಿನಿಂದ ನಮಗೆ ಆ ಮಹಾಶಕ್ತಿ ಮಯಿ, ಶ್ರೀರಾಮಕೃಷ್ಣರ ಲೀಲಾಸಹಚರಿ ಶ್ರೀಮಾತೆಯವರ ಪರಿಚಯ ಒಂದಿಷ್ಟು ಆದೀತು. ಸ್ವಾಮಿ ವಿವೇಕಾನಂದರು ಯುಗಾಚಾರ್ಯರು; ಅಂತೆಯೇ ಯಜ್ಞಾಚಾರ್ಯರು. ಶ್ರೀ ರಾಮಕೃಷ್ಣರ ಭಾವಧಾರೆಯ ಅಥವಾ ಅವರ ಸಂದೇಶಗಳ ಪ್ರಧಾನ ಪ್ರಚಾರಕರು, ಭಾಷ್ಯಕಾರರು. ಶ್ರೀರಾಮಕೃಷ್ಣರ ಮಾತು

ಗಳಿಂದ ತಿಳಿದು ಬರುವಂತೆ, ಸ್ವಾಮೀಜಿ ಸಪ್ತರ್ಷಿಮಂಡಲದಲ್ಲಿರುವ ಒಬ್ಬ ಪ್ರಧಾನ ಋಷಿ. ವಿಶ್ವದ ಕಲ್ಯಾಣಕ್ಕಾಗಿ, ಅ-ಶಿವದ ನಾಶ ಮಾಡುವುದಕ್ಕಾಗಿ ಸಾಕ್ಷಾತ್ ಶಿವನೇ ನರದೇಹವನ್ನು ಧರಿಸಿ ಇಳಿದು ಬಂದನು! ಅತ್ಯಂತ ಗರ್ವದಿಂದ, ಅಥವಾ ತಮ್ಮಲ್ಲಿ ಹಿಂದಿದ್ದ ಸಂಸ್ಕಾರದಿಂದ, ಅಥವಾ ಹಳೆಯ ಸಂಸ್ಕಾರಗಳಿಂದ ಉಂಟಾದ ಅಹಂಕಾರಕ್ಕೆ ವಶರಾಗಿ, ಆಗಿನ ಅನೇಕ ಶ್ರೀರಾಮಕೃಷ್ಣರ ಭಕ್ತರು ಸ್ವಾಮೀಜಿಯವರನ್ನು ಲೌಕಿಕ ದೃಷ್ಟಿಯಿಂದ ನೋಡಿದ್ದರು – ಕಾಯಸ್ಥವಂಶಕ್ಕೆ ಸೇರಿದ ವಿಶ್ವನಾಥ ದತ್ತನ ಮಗ ನರೇಂದ್ರನಾಥ ದತ್ತ ಇವನು — ಎಂಬುದಾಗಿ. ಅವರಲ್ಲಿ ಯಾರಿಗೂ ಮನಸ್ಸಿನಲ್ಲಿ ಹೀಗೆ ಅನ್ನಿಸಲಿಲ್ಲವೆ – ಕಾಯಸ್ಥರ ಮಗನೊಬ್ಬ ಶ್ರೀರಾಮಕೃಷ್ಣರ ಹಾಗೂ ಶ್ರೀಮಾತೆಯವರ ಜೊತೆಯಲ್ಲಿ ಪೂಜೆಗೆ ಪಾತ್ರನಾಗುವನು ಎಂದು? ಇದೇ ರೀತಿಯಲ್ಲಿ, ಪೂರ್ವಬಂಗಾಳದಲ್ಲಿ (ಈಗಿನ ಬಾಂಗ್ಲಾ ದೇಶ) ಒಂದೆಡೆ ಭಕ್ತರ ಸಂಘವೊಂದು ತಮ್ಮ ಆಶ್ರಮದ ದೇವರಕೋಣೆಯಲ್ಲಿ ಶ್ರೀರಾಮಕೃಷ್ಣರ, ಶ್ರೀಮಾತೆಯವರ ಚಿತ್ರಪಟದೊಂದಿಗೆ ಸ್ವಾಮೀಜಿಯವರ ಭಾವಚಿತ್ರವನ್ನು ಇಟ್ಟಿರಲಿಲ್ಲ. ಈ ಸುದ್ದಿ ಶ್ರೀಮಾತೆಯವರ ಕಿವಿಗೆ ಬಿತ್ತು. ಆ ಭಕ್ತರ ಸಂಘದ ಬ್ರಾಹ್ಮಣ್ಯದ ಗರ್ವವನ್ನು ಚೂರು ಚೂರು ಮಾಡುವಂತೆ ಶ್ರೀಮಾತೆ ಜೋರಾದ ಧ್ವನಿಯಲ್ಲಿ ಹೀಗೆಂದರು: ''ಎಲ್ಲಿ ನರೇನ್‌ನ (ಸ್ವಾಮಿ ವಿವೇಕಾನಂದರ) ಪೂಜೆ ನಡೆಯುವುದಿಲ್ಲವೋ, ಅಲ್ಲಿ ಶ್ರೀರಾಮಕೃಷ್ಣರು ಪೂಜೆಯನ್ನು ಸ್ವೀಕರಿಸಲಾರರು!'' ಇದನ್ನು ನಾವು ಸ್ವಾಮಿ ಶಾರದಾನಂದ, ಸ್ವಾಮಿ ಪ್ರೇಮಾನಂದರಿಂದ ತಿಳಿದೆವು. ಇದರೊಂದಿಗೆ, ಇದಕ್ಕೆ ಸಾಕ್ಷ್ಯ ನೀಡುವಂತೆ ಇನ್ನೂ ಒಂದು ಘಟನೆಯನ್ನು ನಾನು ಬಲ್ಲೆ. ಅದನ್ನೂ ಇಲ್ಲಿ ಹೇಳುತ್ತೇನೆ. ಪೂರ್ವಬಂಗಾಳದಲ್ಲೇ ಇನ್ನೊಂದು ಭಕ್ತರ ಸಂಘವು ನಡೆಸುತ್ತಿದ್ದ ಆಶ್ರಮದಲ್ಲಿ, ದೇವಾಲಯದಲ್ಲಿ ಒಂದೇ ಕೋಣೆಯಲ್ಲಿ ಶ್ರೀರಾಮಕೃಷ್ಣ-ಶಾರದಾದೇವಿ-ಸ್ವಾಮೀಜಿಯವರ ಚಿತ್ರಗಳನ್ನಿಟ್ಟು ಪೂಜೆ ಮಾಡುತ್ತಿದ್ದರು. ಅವರೆಲ್ಲ ಒಮ್ಮೆ ಶ್ರೀಮಾತೆಯವರ ದರ್ಶನ ಪಡೆಯಲು ಬಾಗ್‌ಬಜಾರಿನಲ್ಲಿದ್ದ 'ಶ್ರೀಮಾತೆಯವರ ಮನೆ'ಗೆ ('ಉದ್ಬೋಧನ') ಹೋಗಿದ್ದರು. ಅವರಲ್ಲಿ ಒಬ್ಬರ ಮನಸ್ಸಿನಲ್ಲಿ ಒಂದು ಸಲ ಇದ್ದಕ್ಕಿದ್ದಂತೆ ಸಂದೇಹ ಮೂಡಿತು – ಶ್ರೀರಾಮಕೃಷ್ಣರ, ಶ್ರೀಮಾತೆಯವರ ಪೂಜೆ ಮಾಡುವಾಗ, ಈ ರೀತಿ ಅದೇ ಸಾಲಿನಲ್ಲಿ ಅವರ ಶಿಷ್ಯರಲ್ಲೊಬ್ಬರಿಗೂ ಸ್ಥಾನ ನೀಡಿರುವುದು ಸರಿಯೆ? ಇದು ಶ್ರೀಮಾತೆಗೆ ಸಮ್ಮತವೆ? – ಎಂದು. ಅದರಿಂದಾಗಿ, ಅವರೆಲ್ಲ ತಾವು ಯಾವ ರೀತಿ ಪೂಜೆ ಮಾಡುತ್ತಿದ್ದರೋ ಅದನ್ನು ತುಂಬ ಭಯ, ಹಿಂಜರಿಕೆಗಳಿಂದ ಶ್ರೀಮಾತೆಯವರಿಗೆ ತಿಳಿಸಿದರು. ನೋಡನೋಡುತ್ತಿದ್ದಂತೆ ಶ್ರೀಮಾತೆಯವರ ಮುಖ ಗಂಭೀರವಾಯಿತು. ಅವರಿಗೆಲ್ಲ ಅದನ್ನು ಕಂಡು ತುಂಬಾ ಭಯವುಂಟಾಯಿತು. ಹಾಗಿದ್ದರೆ ಹೀಗೆ ಸ್ವಾಮೀಜಿಯವರ ಪೂಜೆ ಶ್ರೀಮಾತೆಯವರಿಗೆ ಸಮ್ಮತವಲ್ಲವೆ? ಹಠಾತ್ತನೆ ಶ್ರೀಮಾತೆಯವರು ಗಂಭೀರ ಧ್ವನಿಯಿಂದ ಹೇಳಿದರು, ''ಠಾಕೂರರು ಇದ್ದಿದ್ದರೆ ಹಾಗೆ ಮಾಡಲು ಬಿಡುತ್ತಿದ್ದರೆ?'' ಭಕ್ತರಲ್ಲಿ ಒಬ್ಬರ ಕಾಲುಗಳು ಗಡಗಡನೆ ನಡುಗತೊಡಗಿದವು. ಶ್ರೀಮಾತೆ ಮಾತು ಮುಂದುವರಿಸಿದರು, ''ಠಾಕೂರರು ಇದ್ದಿದ್ದರೆ ನರೇನ್‌ನನ್ನು ಪಕ್ಕದಲ್ಲಿ ಕುಳ್ಳಿರಿಸುತ್ತಿದ್ದರೆ? ಅವರು ನರೇನ್‌ನನ್ನು ಮಡಿಲಲ್ಲಿ ಕುಳ್ಳಿರಿಸುತ್ತಿದ್ದರು. ನರೇನ್ ಅವರ ತಲೆಯ ಚೂಡಾಮಣಿ!'' ಭಕ್ತರ ಕಣ್ಣುಗಳಲ್ಲಿ ಆನಂದದ ಕಣ್ಣೀರು ಇಳಿದು ಬರತೊಡಗಿತು. ಇದಾದ ನಂತರ ಹೇಳಲು, ಯೋಚಿಸಲು ಇನ್ನೇನು ಉಳಿದಿದೆ?

ಪೂಜ್ಯಪಾದ ಸ್ವಾಮಿ ಬ್ರಹ್ಮಾನಂದರು ಶ್ರೀಮಾತೆಯವರ ದರ್ಶನ ಮಾಡಲು ಹೋದರೆ, ಕಂಪಿಸುತ್ತಿದ್ದರು — ಇದನ್ನು ನನ್ನ ಕಣ್ಣುಗಳಿಂದಲೇ ನೋಡಿದ್ದೇನೆ, ಹಾಗೂ ಇತರರು ನೇರವಾಗಿ ನೋಡಿದ್ದರೆಂಬುದನ್ನೂ ಕೇಳಿದ್ದೇನೆ. ಅವರಿಗೆ ಶ್ರೀಮಾತೆಯವರ ಎದುರಿಗೆ ಚೆನ್ನಾಗಿ ಮಾತನಾಡಲೂ ಸಾಧ್ಯವಾಗುತ್ತಿರಲಿಲ್ಲ. ಸಾಧು ನಾಗ ಮಹಾಶಯರು ನಡುಗುತ್ತಾ 'ಉದ್ಬೋಧನ'ದಲ್ಲಿ ಮೇಲಂತಸ್ತಿಗೆ ಹೋಗುವ ಮೆಟ್ಟಿಲ ತನಕವೂ ಹೋದರು; ಆದರೆ ಶ್ರೀಮಾತೆಯವರ ಕೋಣೆಯ ತನಕ ಹೋಗುವುದು ಸಾಧ್ಯವಾಗಲಿಲ್ಲ. ಅವರನ್ನು ಕೆಲವರು ಒಂದು ರೀತಿ ಎತ್ತಿಕೊಂಡೇ ಹೋಗಬೇಕಾಯಿತು. ಇದೇ ರೀತಿ ಇನ್ನೂ ಅನೇಕ ಘಟನೆಗಳಿವೆ. ಆದ್ದರಿಂದ, ಶ್ರೀಮಾತೆಯವರ ಬಗ್ಗೆ ನಾವು ಏನು ಹೇಳಬಲ್ಲೆವು, ಅಥವಾ ಇನ್ನೇನು ಹೇಳಲು ಉಳಿದಿದೆ? ನಾವಾದರೋ ಕ್ಷುದ್ರರಲ್ಲಿ ಕ್ಷುದ್ರರು; ತುಚ್ಛರಲ್ಲಿ ತುಚ್ಛರು. ಆದರೆ ಇದು ನಮ್ಮ ಸೌಭಾಗ್ಯ –ದೌರ್ಭಾಗ್ಯವೆನ್ನಲಾರೆ – ಅವರ ಪಾದಗಳನ್ನೇ ಆಶ್ರಯಿಸಿದ ನಮಗೆ ಜಿಜ್ಞಾಸುಗಳಾದ ಭಕ್ತರ ಒತ್ತಾಯದ ಮೇರೆಗೆ ಅವರನ್ನು ಕುರಿತು ಕೆಲವೊಂದು ಮಾತುಗಳನ್ನು ಹೇಳಬೇಕಾಗಿದೆ.

ಆಗ ಶ್ರೀಮಾತೆಯವರಿಂದ ದೀಕ್ಷೆಪಡೆದ ಭಕ್ತರಿಗಲ್ಲದೆ ಬೇರೆ ಯಾರಿಗೂ ಅವರ ಭಾವಚಿತ್ರವನ್ನು ನೀಡಲಾಗುತ್ತಿರಲಿಲ್ಲ. ಇಂದಾದರೆ ಮನೆ-ಮನೆಗಳಲ್ಲಿ ; ರಂಗಭೂಮಿ, ಸಿನಿಮಾ ಥಿಯೇಟರ್, ಬೀದಿ ಬೀದಿಗಳಲ್ಲಿ ಅವರ ಚಿತ್ರ ಕಂಡುಬರುತ್ತದೆ. ಯಾರ ಕಣ್ಣಿಗೂ ಬೀಳದಂತೆ ಗೋಪ್ಯವಾಗಿರುವುದೇ ಅಭ್ಯಾಸವಾಗಿದ್ದ ಶ್ರೀಮಾತೆಯವರನ್ನು ಅವರ ಶಿಷ್ಯಂದಿರು ಇನ್ನಷ್ಟು ಗೋಪ್ಯವಾಗಿರಿಸಿ ರಕ್ಷಿಸುತ್ತಿದ್ದರು. ಇದು ನಿಸ್ಸಂದೇಹವಾಗಿಯೂ ಲೋಕಕಲ್ಯಾಣಕ್ಕಾಗಿ. ಪೂಜ್ಯ ಸ್ವಾಮಿ ಶಾರದಾನಂದರು ಒಮ್ಮೆ ನನ್ನ ಬರವಣಿಗೆಯ ಬಗ್ಗೆ ಈ ರೀತಿ ಉಪದೇಶ ನೀಡಿ ಹೇಳಿದ್ದರು: ''ಶ್ರೀಮಾತೆಯವರ ಮಾತುಗಳನ್ನು ಉದ್ಧರಿಸಿ ಬರೆದರೆ, ಚೆನ್ನಾಗಿ ಅದರ ಉಲ್ಲೇಖವನ್ನು ನೀಡಬೇಕು. ಶ್ರೀರಾಮಕೃಷ್ಣರ ಮಾತುಗಳನ್ನು ಉದ್ಧರಿಸಿದರೆ ನೀನು ಉಲ್ಲೇಖ ನೀಡಬಹುದು, ಆದರೆ ಅದನ್ನು ತುಂಬ ತರ್ಕಬದ್ಧವಾದ ರೀತಿಯಲ್ಲಿ ನೀಡಬೇಕು.''

ಧಾರ್ಮಿಕ ವಿಚಾರಗಳಲ್ಲಿ ಆಸಕ್ತರಾದ ಜನರು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಶ್ರೀರಾಮಕೃಷ್ಣ ಭಾವಧಾರೆಯತ್ತ ಆಕರ್ಷಿತರಾಗು

ವುದನ್ನು ಇತ್ತೀಚೆಗೆ ನೋಡಿ ನಮಗೆ ಮುಗ್ಧ ವಿಸ್ಮಯವುಂಟಾಗುತ್ತಿದೆ. ಅವರ ಶಿಷ್ಯಂದಿರ ಬಾಯಿಯಿಂದಲೇ ಕೇಳಿದ್ದೇನೆ, ಶ್ರೀರಾಮಕೃಷ್ಣರು ಹೀಗೆ ಹೇಳಿದ್ದರಂತೆ: ''ನೋಡು, ಯಾರಾದರೂ ಒಂದೇ ಒಂದು ಸಲವಾದರೂ ಕಾಯಾ ವಾಚಾ ಮನಸಾ ಭಗವಂತನನ್ನು ಪ್ರಾರ್ಥಿಸುತ್ತಾನೋ ಅವನು ಇಲ್ಲಿಗೆ ಬರಲೇಬೇಕು.'' ಅದೇ ಈಗ ಸತ್ಯವಾಗುತ್ತಿದೆ. ಅವರು ಯೋಗೇಶ್ವರರು; ಅವರ ಮಾತು ವ್ಯರ್ಥವಾಗುವುದಿಲ್ಲ.

ಯಾವ ಶಕ್ತಿಯು ಕಣ್ಣು ತೆರೆದಾಗ ಸಮಸ್ತ ಜಗತ್ತು ಎಚ್ಚರಗೊಳ್ಳುವುದೋ, ಅವರ ಪೂರ್ಣ ವಿಕಾಸವನ್ನು ಕಲ್ಪಿಸಿಕೋ – ಎಂದು ಸ್ವಾಮೀಜಿ ಹೇಳುತ್ತಿದ್ದರು. ಇನ್ನೊಂದು ಅತ್ಯಾಶ್ಚರ್ಯದ ಸಂಗತಿಯೇನೆಂದರೆ, ಯಾರು ಸ್ವಲ್ಪ ಸಮಯದವರೆಗೆ ಈ ಭಾವಧಾರೆಯತ್ತ ಆಕರ್ಷಿತರಾಗಿದ್ದಾರೋ ಅವರು ಪ್ರಧಾನವಾಗಿ ಆಕರ್ಷಿತರಾಗುತ್ತಿದ್ದುದು ಶ್ರೀಮಾತೆಯವರ ಮಾತುಗಳನ್ನು ಕೇಳಲು ಹಾಗೂ ಅದನ್ನು ಅರಿತುಕೊಳ್ಳಲು. ಶ್ರೀಮಾತೆಯವರು ಮಹಾಶಕ್ತಿ; ಜಿಜ್ಞಾಸುಗಳಿಗೆ ಅವರ ವಿಕಾಸ-ವೈಭವಗಳ ಬಗ್ಗೆ ಗೊತ್ತಿರುವುದು ಅತ್ಯಲ್ಪ ಮಾತ್ರ. ಹೆಚ್ಚೇನು ತಿಳಿದಿದ್ದಾರೆ – ಅವರ ಹೆಸರನ್ನಷ್ಟೇ ಕೇಳಿದ್ದಾರೆ, ಅಷ್ಟೆ.

ಬಹುಶಃ ಇಲ್ಲಿಯವರೆಗೂ ಪ್ರಕಟವಾಗದ ಒಂದು ಮಹತ್ವದ ಘಟನೆ ನೆನಪಿಗೆ ಬರುತ್ತಿದೆ. ನಾನು ಈ ಘಟನೆಯನ್ನು ಕೇಳುವ ಸೌಭಾಗ್ಯ ದೊರೆತುದು ಪೂಜ್ಯ ಸ್ವಾಮಿ ಅಭೇದಾನಂದರಿಂದ. ಅವರು ಶ್ರೀಮಾತೆಯವರ ಬಗ್ಗೆ ಒಂದು ಸ್ತೋತ್ರವನ್ನು ರಚಿಸಿದ್ದರು. ಶ್ರೀಮಾತೆಯವರಿಗೆ ಅದನ್ನು ಓದಿ ಹೇಳಬೇಕೆಂದು ಅವರಿಗೆ ಬಯಕೆಯುಂಟಾಯಿತು. ಅದನ್ನು ಶ್ರೀಮಾತೆಯವರ ಬಳಿ ಕೇಳಿಕೊಂಡಾಗ ಅವರು ಒಮ್ಮೆಲೇ ಚಕಿತರಾಗಿ ಕೇಳಿದರು, ''ಏನು ಸ್ತೋತ್ರ? ಯಾರ ಸ್ತೋತ್ರ ಅದು?'' ವಿನೀತವಾದ ಕಂಠದಿಂದ ಮಹಾರಾಜ್ ಹೇಳಿದರು, ''ಅಮ್ಮಾ, ಇದು ನಿಮ್ಮ ಸ್ತೋತ್ರಗೀತೆ.'' ಶ್ರೀಮಾತೆ ಆಗ ಆಶ್ಚರ್ಯಚಕಿತರಾಗಿ ಹೇಳಿದರು, ''ಮಗೂ, ನನ್ನ ಮೇಲೆ ಅದೇನು ಸ್ತೋತ್ರ?'' ಆದರೆ ತಮ್ಮ ಭಕ್ತಶ್ರೇಷ್ಠನ ಅತಿಯಾದ ಒತ್ತಾಯದ ಮೇರೆಗೆ ಅವರು ಸ್ಥಿರಭಾವದಿಂದ ಅದನ್ನು ಕೇಳಿಸಿಕೊಂಡರು – ಅದೇ ಪ್ರಸಿದ್ಧವಾದ **'ಪ್ರಕೃತಿಂ ಪರಮಾಂ'** ಸ್ತೋತ್ರ. ಅಭೇದಾನಂದ ಮಹಾರಾಜ್ ಹಾಡುತ್ತ, 'ರಾಮಕೃಷ್ಣಗತಪ್ರಾಣಾಂ' ಎಂಬ ಸಾಲನ್ನು ಹಾಡಿದರು; ಅದನ್ನು ಕೇಳಿದ ಶ್ರೀಮಾತೆಯವರು ಸ್ವಲ್ಪವೂ ಅಲುಗಾಡದೆ ಸ್ಥಿರವಾಗಿಬಿಟ್ಟರು. 'ತನ್ನಾಮಶ್ರವಣಪ್ರಿಯಾಂ' ಎಂಬ ಭಾಗವನ್ನು ಉಚ್ಚರಿಸಿದ ಕೂಡಲೇ ಅವರ ಎರಡೂ ಕಣ್ಣುಗಳಿಂದ ಅಶ್ರುಧಾರೆ ಸುರಿಯತೊಡಗಿತು. 'ತದ್ಭಾವರಂಜಿತಾಕಾರಾಂ' ಎಂದು ಹಾಡಿದ ನಂತರ ಅಭೇದಾನಂದ ಮಹಾರಾಜ್ ನೋಡುತ್ತಾರೆ, ಅಲ್ಲಿ ಶ್ರೀಮಾತೆಯವರು ಇರಲಿಲ್ಲ; ಶ್ರೀರಾಮಕೃಷ್ಣರೇ ಅಲ್ಲಿ ಕುಳಿತಿದ್ದಾರೆ! ಅಥವಾ ಶ್ರೀಮಾತೆ ಸ್ವಯಂ ತಾವೇ ಠಾಕೂರರಾಗಿಬಿಟ್ಟಿದ್ದಾರೆ. ಅವರೂ ಆ ಲೋಕದಲ್ಲಿ ಇದ್ದಂತಿರಲಿಲ್ಲ. ಅವರು ಇನ್ನೇನನ್ನು ನೋಡಿದ್ದಾರೋ ಅದನ್ನು ನಮಗೆ ಹೇಳುವುದು ಸಾಧ್ಯವಿಲ್ಲ.[೧]

೧೯೧೨ರ ನವೆಂಬರ್ ತಿಂಗಳು ಅದು. ನಾನು ಕಾಶೀಧಾಮಕ್ಕೆ ಹೋಗಿದ್ದೆ. ಅಲ್ಲಿಗೆ ಹೋದ ಮರುದಿನ ಸಂಜೆ ನಾನು ಶ್ರೀರಾಮಕೃಷ್ಣ ಅದ್ವೈತ ಆಶ್ರಮಕ್ಕೆ ಹೋದೆ. ಅಲ್ಲಿ ಶ್ರೀಯುತ 'ಮ' ಅವರು ಒಂದು ಗ್ರಂಥವನ್ನು ವಾಚನ ಮಾಡುತ್ತಿದ್ದರು. ಕೆಲವು ಮಂದಿ ಅವರ ಸುತ್ತಮುತ್ತ ಕುಳಿತು ಅದನ್ನು ಕೇಳಿಸಿಕೊಳ್ಳುತ್ತಿದ್ದರು. ಪೂಜ್ಯ ಹರಿ ಮಹಾರಾಜರು (ಸ್ವಾಮಿ ತುರೀಯಾನಂದರು) ಪಕ್ಕದಲ್ಲೇ ಇದ್ದ ಖಾಲಿ ಜಾಗದಲ್ಲಿ ಶಥಪಥ ಹಾಕುತ್ತ ಅವರು ಓದುತ್ತಿದ್ದುದನ್ನು ಕೇಳಿಸಿಕೊಳ್ಳುತ್ತಿದ್ದರು.

ನನ್ನತ್ತ ನೋಡಿದ ಕೂಡಲೇ ಮಾಸ್ಟರ್ ಮಹಾಶಯರು ತಮ್ಮ ಸರಳ ಸ್ವಭಾವಕ್ಕೆ ಅನುಗುವಾಗಿ, ''ಓ! ಯಾವಾಗ ಬಂದಿರಿ? ಕುಳಿತುಕೊಳ್ಳಿ. ಆಮೇಲೆ ಮಾತಾಡುವಿರಂತೆ'' ಎಂದರು. ನಾನು ಕುಳಿತೆ. ಸ್ವಲ್ಪ ಹೊತ್ತಿನಲ್ಲಿ ಪಠನ ಮುಗಿದ ನಂತರ ಅವರು ಕೇಳಿದರು, ''ಗೋಪೀ ಗೀತೆಯನ್ನು ಓದಿದ್ದೀರಾ?'' ನಾನಂದೆ, ''ಕ್ರಮಬದ್ಧವಾಗಿ ಓದಿಲ್ಲ, ಸುಮಾರಾಗಿ ಓದಿದ್ದೇನೆ.''

''ಓದಿ. ಬಹಳ ಅದ್ಭುತವಾದ ಕೃತಿ ಅದು.''

''ಓದುತ್ತೇನೆ'' ಎಂದೆ; ನಂತರ ನಾನು ಒಳಗೊಳಗೇ ನಕ್ಕೆ. ನಿಜಕ್ಕೂ ಅದು ಅದ್ಭುತವಾದ ಕೃತಿಯೇ! ಅದೂ ನಿಮ್ಮ ಬಳಿ ಅದು ಇನ್ನಷ್ಟು ಅದ್ಭುತ. ಗೊತ್ತಲ್ಲ ನನಗೆ, ನೀವು ದೈವೀ ಪುರುಷನ ದೈವೀಲೀಲೆಯಲ್ಲಿ ಒಂದಂಶವೇ ಆಗಿದ್ದವರೆಂದು!

ನಾನು ವಿಚಾರಿಸಿದ ಮೇಲೆ ಅವರೆಂದರು, ''ಈ ರಸ್ತೆಯ ಕೊನೆಯಲ್ಲಿರುವ ಮನೆ 'ಲಕ್ಷ್ಮೀನಿವಾಸ'ದಲ್ಲಿ ಶ್ರೀಮಾತೆಯವರು ಇದ್ದಾರೆ. ಪ್ರಣಾಮ ಮಾಡಿ ಬನ್ನಿ.''

ಆಗ ಸರಿಸುಮಾರಾಗಿ ಹೊತ್ತು ಕತ್ತಲೆಯಾಗುತ್ತ ಬಂದಿತ್ತು. ಶ್ರೀಮಾತೆಯವರ ಶ್ರೀಚರಣಗಳ ದರ್ಶನ ಮಾಡಿ ಬರಲು ನಾನು ಹೊರಟೆ.

ಕಂಟೋನ್ಮೆಂಟ್ ರಸ್ತೆಯನ್ನು ದಾಟಿ, 'ಲಕ್ಷ್ಮೀನಿವಾಸ'ದ ಕಡೆಗೆ ಹೊರಟೆ. ಬಲಭಾಗದಲ್ಲಿ ಖಾಲಿ ಜಾಗ; ಎಡ ಬದಿಯಲ್ಲಿ

---

೧ ಸ್ವಾಮಿ ಅಭೇದಾನಂದ ಮಹಾರಾಜ್ ತಾವು ರಚಿಸಿದ 'ಶಾರದಾ-ಸ್ತೋತ್ರ' ('ಪ್ರಕೃತಿಂ ಪರಮಾಂ' ಎಂದು ಇದು ಆರಂಭವಾಗುತ್ತದೆ)ವನ್ನು ಶ್ರೀಮಾತೆಯವರ ಮುಂದೆ ಹಾಡಿದ್ದು ಬೇಲೂರಿನ ನೀಲಾಂಬರ ಮುಖ್ಯೋಪಾಧ್ಯಾಯನ ಉದ್ಯಾನದಲ್ಲಿ. ೧೮೯೮ನೇ ಇಸವಿಯ ಮೇ ತಿಂಗಳ ಮಧ್ಯಭಾಗದಿಂದ ಅಕ್ಟೋಬರ್ ಕೊನೆಯವರೆಗೆ ಶ್ರೀಮಾತೆಯವರು ಈ ಮನೆಯಲ್ಲಿದ್ದರು. ಭಕ್ತರ ಪ್ರಯತ್ನ ಹಾಗೂ ಆರ್ಥಿಕ ವ್ಯವಸ್ಥೆಯಿಂದಾಗಿ ಈ ಮನೆಯನ್ನು ಬಾಡಿಗೆಗೆ ತೆಗೆದುಕೊಳ್ಳಲಾಗಿತ್ತು. ಈ ಆರು ತಿಂಗಳ ನಡುವೆ ಯಾವುದೋ ಒಂದು ದಿನ ಸ್ವಾಮಿ ಅಭೇದಾನಂದರು ಈ ಸ್ತೋತ್ರವನ್ನು ಶ್ರೀಮಾತೆಯವರ ಮುಂದೆ ಹಾಡಿದರು. ಶ್ರೀಮಾತೆ ಅದನ್ನು ಕೇಳಿ ಸಂತಸಗೊಂಡು ಮಹಾರಾಜರಿಗೆ ಆಶೀರ್ವಾದ ಮಾಡುತ್ತ, 'ನಿನ್ನ ಕಂಠದಲ್ಲಿ ಸರಸ್ವತಿ ನೆಲೆಸುತ್ತಾಳೆ' ಎಂದರು. ಈ ಸಮಯದಲ್ಲಿ ಶ್ರೀಮಾತೆಯವರ ಜೊತೆಗೆ ಪ್ರಧಾನವಾಗಿ ಇದ್ದವರೆಂದರೆ, ಗೋಲಾಪ್-ಮಾ ಹಾಗೂ ಯೋಗಿನ್ ಮಾ. ಅವರ ಸೇವಕರಾಗಿ ಸ್ವಾಮಿ ಯೋಗಾನಂದರೂ ಅಲ್ಲಿದ್ದರು. *(-ಸಂ)*

ಸಾಲಾಗಿ ಮಣ್ಣಿನ ಮನೆಗಳಿದ್ದುವು. ಹೊಸದಾಗಿ ನಿರ್ಮಿತವಾದ ಮನೆಗಳು ಎಂಬಂತಿದ್ದವು. ತುಸುದೂರದಲ್ಲೇ ಒಂದು ಒಂದೂವರೆ ಕೈಯಳತೆಯಷ್ಟು ಅಗಲವಾದ ಗಲ್ಲಿಯ ರಸ್ತೆ. ದಾರಿಯ ನಡುವೆಯೇ ನಾನು ಬ್ರಹ್ಮಚಾರಿ ರಾಸಬಿಹಾರಿ ಮಹಾರಾಜರನ್ನು ನೋಡಿದೆ. ಅವರು 'ಲಕ್ಷ್ಮೀನಿವಾಸ'ದಿಂದ ಅದ್ವೈತ ಆಶ್ರಮಕ್ಕೆ ಹೊರಟಿದ್ದರು. ನನ್ನನ್ನು ಏನು, ಎತ್ತ ಎಂದೆಲ್ಲ ವಿಚಾರಿಸಿದರು. ಮತ್ತೆ ಅವರು ಕೇಳಿದರು: ''ಮಾಸ್ಟರ್ ಮಹಾಶಯರಲ್ಲಿ ಏನಾದರೂ ಬದಲಾವಣೆಯನ್ನು ಕಂಡಿರಾ?'' ಯಾವ ಬದಲಾವಣೆ, ಎಂಥ ಬದಲಾವಣೆ ಎಂಬಿತ್ಯಾದಿ ಏನೂ ನನಗೆ ತಿಳಿಯಲಿಲ್ಲ. ಮತ್ತೆ ಒಂದೆರಡು ಮಾತುಗಳನ್ನಾಡಿದ ಬಳಿಕ ಹೇಳಿದರು, ''ಅವರಿಗೆ ಅತ್ಯಂತ ಪ್ರೀತಿಪಾತ್ರಳಾದ ಒಬ್ಬಳು ಹೆಣ್ಣುಮಗಳು ಬಾಂಬೇಯಲ್ಲಿ ಕಾಲರಾ ಬಂದು ತೀರಿಕೊಂಡಳು. ಕೆಲವೇ ಗಂಟೆಗಳ ಮುನ್ನ ಟೆಲಿಗ್ರಾಂ ಬಂತು. ನೋಡಿ, ನಾನಾದರೋ ಸಂಸಾರ ತ್ಯಾಗ ಮಾಡಿ ಬಂದಿದ್ದೇನೆ; ಬ್ರಹ್ಮಚಾರಿಯಾಗಿದ್ದೇನೆ. ಆದರೆ ನೋಡಿ, ಯಾರಾದರೂ ಆತ್ಮೀಯರು ಹೀಗೆ ಆಕಸ್ಮಿಕ ಮೃತ್ಯುವಿಗೆ ಈಡಾದ ನಂತರ ಸ್ವಲ್ಪ ಸಮಯದಲ್ಲೇ ನಿರ್ವಿಕಾರ ಭಾವದಿಂದ ಇರುವುದು ನನಗೆ ಸಾಧ್ಯವಿಲ್ಲ. ಮಾಸ್ಟರ್ ಮಹಾಶಯರು ಗೃಹಸ್ಥರು, ನಾನು ತ್ಯಾಗಿ – ಈಗ ತಿಳಿಯಿರಿ, ಅವರು ಎಷ್ಟು ದೊಡ್ಡವರು ಅಂತ! ''

ನಾನು ವಿಸ್ಮಯದಿಂದ, ಮೂಕನಾಗಿ ಅರ್ಥಮಾಡಿಕೊಂಡೆ. ಬಳಿಕ ರಾಸಬಿಹಾರಿ ಮಹಾರಾಜರು ಶ್ರೀಮಾತೆಯವರು ಇರುವ ಸ್ಥಳವನ್ನು ತೋರಿಸಿಕೊಟ್ಟು, ಅಲ್ಲಿಂದ ಹೊರಟರು. ಇನ್ನೂ ಇಬ್ಬರು ತರುಣರು ನನ್ನ ಹಿಂದೆಯೇ ಶ್ರೀಮಾತೆಯವರ ದರ್ಶನ ಪಡೆಯಲು ಬರುತ್ತಿದ್ದುದನ್ನು ನಾನು ನೋಡಿದೆ. ಅವರ ಮನೆ ಕಲ್ಕತ್ತೆಯ ಭವಾನೀಪುರದಲ್ಲಿ. ಪ್ರವಾಸ ಮಾಡುತ್ತಾ ಸುತ್ತಾಡಿಕೊಂಡು ಬಂದಿದ್ದಾರೆ. ಮಾಸ್ಟರ್ ಮಹಾಶಯರೊಂದಿಗೆ ನಾನು ನಡೆಸಿದ ಮಾತುಕತೆಗಳನ್ನು ಕೇಳಿಸಿಕೊಂಡು ಅವರಿಗೆ ಶ್ರೀಮಾತೆಯವರ ದರ್ಶನ ಮಾಡುವ ಇಚ್ಛೆ ಉಂಟಾಗಿರಬೇಕೆಂದು ನನಗನ್ನಿಸಿತು. ಮಹಾರಾಜರು ತೋರಿಸಿಕೊಟ್ಟ ಸ್ಥಳಕ್ಕೆ ಹೋಗಿ ನೋಡಿದಾಗ, ಅಲ್ಲಿ ಯಾರೂ ಕಾಣಿಸಲಿಲ್ಲ. ಮಣ್ಣಿನ ಮನೆಯ ಮಹಡಿಯ ಮೇಲಿನ ವರಾಂಡದಲ್ಲಿ ಶ್ರೀಮಾತೆಯವರು ಕುಳಿತಿರುತ್ತಾರೆ ಎಂದು ರಾಸಬಿಹಾರಿ ಮಹಾರಾಜರು ಹೇಳಿದ್ದರು. ಆದರೆ ಅಲ್ಲಿ ಯಾರೂ ಕಾಣಿಸಲಿಲ್ಲ. ಒಂದು ಮೂಲೆಯಲ್ಲಿ ಇಡೀ ದೇಹವನ್ನು ದಪ್ಪನೆಯ ವಸ್ತ್ರದಿಂದ ಹೊದ್ದುಕೊಂಡಿದ್ದ ಒಂದು ಜೀವಿಯಿದ್ದಂತೆ ಅನುಮಾನವುಂಟಾಯಿತು. ನಾನು ಉಳಿದವರೊಡನೆ ಮಾತನಾಡತೊಡಗಿದೆ, ತುಸು ಸದ್ದನ್ನೂ ಮಾಡಿದೆ. ಆದರೆ ಅದಕ್ಕೆ ಯಾವುದೇ ಪ್ರತ್ಯುತ್ತರ ಬರಲಿಲ್ಲ. ನಾನು ದೂರದಿಂದಲೇ ನೋಡಿ ನಮಸ್ಕರಿಸಿದೆ. ನಾನು ನೋಡಿದ ವ್ಯಕ್ತಿಯೇ ಶ್ರೀಮಾತೆಯವರು ಎಂದು ತಿಳಿಯುವುದು ಕಷ್ಟವಾಗಲಿಲ್ಲ. ಅವರ ಪಾದಗಳು ಎಲ್ಲಿವೆ ಎಂದು ಗೊತ್ತಾಗದೆ, ಅವರ ಪಾದಧೂಳಿಯನ್ನು ಸ್ವೀಕರಿಸಬೇಕೆಂಬ ಆಸೆಯನ್ನು ಬಿಟ್ಟುಬಿಟ್ಟು, ಕೆಳಗಿಳಿದು ಬಂದೆ. ಉಳಿದ ಇಬ್ಬರೂ ನನ್ನೊಡನೆ ಬಂದರು. ನನ್ನ ಮನಸ್ಸು ಕೆಟ್ಟು ಹೋಗಿತ್ತು. ಮನಸ್ಸಿನ ಭಾರವನ್ನು ಇಳಿಸಲು ವಿಶ್ವೇಶ್ವರನ ಹಾಗೂ ಗಂಗೆಯ ದರ್ಶನ ಮಾಡಲು ಹೋದೆ.

ವಿಶ್ವನಾಥನ ಗಲ್ಲಿಗೆ ವಿರುದ್ಧ ದಿಕ್ಕಿನಲ್ಲಿ ಬರುತ್ತಿದ್ದ ಮಾಸ್ಟರ್ ಮಹಾಶಯರು ಸಿಕ್ಕಿದರು. ''ಓ, ಇಲ್ಲಿದ್ದಾರೆ'' ಎಂದ ಅವರು ಭುಜದ ಮೇಲೆ ಕೈಯಿಟ್ಟರು. ಮತ್ತೆ ಕೇಳಿದರು, ''ಶ್ರೀಮಾತೆಯವರ ದರ್ಶನವಾಯಿತೆ?''

ನಾನು ವ್ಯಥೆಯಿಂದ ಕೂಡಿದ ಸ್ವರದಿಂದ ಹೇಳಿದೆ: ''ಮಾಸ್ಟರ್ ಮಹಾಶಯರೆ, ದೂರದಿಂದ ಪ್ರಣಾಮ ಮಾಡಿದೆ. ಬಟ್ಟೆಯಿಂದ ಹೊದ್ದುಕೊಂಡಿದ್ದ ಒಂದು ಮೂಟೆಯ ದರ್ಶನವಾಯಿತು.'' ಅದಕ್ಕೆ, ''ಹೌದೆ?'' ಎಂದ ಅವರು ಎಲ್ಲವನ್ನೂ ಕೇಳಿ ತಿಳಿದುಕೊಂಡರು. ಸ್ವಲ್ಪ ಹೊತ್ತು ಸುಮ್ಮನಿದ್ದ ಅವರು ಅನಂತರ ಕೇಳಿದರು,

''ನೀವು ಒಬ್ಬರೇ ಇದ್ದಿರಾ?''

''ಇಲ್ಲ, ಇನ್ನೂ ಇಬ್ಬರು ತರುಣರಿದ್ದರು.''

''ನಿಮಗೆ ಪರಿಚಿತರೆ?''

''ಇಲ್ಲ. ನಿಮ್ಮ ಮಾತುಗಳನ್ನು ಕೇಳಿ ಅವರೂ ಶ್ರೀಮಾತೆಯವರನ್ನು ನೋಡಲು ಹೋಗಿದ್ದರು.'' ಮಾಸ್ಟರ್ ಮಹಾಶಯರು ನಕ್ಕೇಬಿಟ್ಟರು. ಅನಂತರ ಹೇಳಿದರು: ''ಸಂಗದೋಷದಿಂದ ನಿಮಗೆ ಮಾತೃದರ್ಶನವಾಗಲಿಲ್ಲ. ನೀವು ಮಾತೃದರ್ಶನ ಮಾಡಲು ಹೋಗಿದ್ದಿರಿ. ಅವರು ಪರಮಹಂಸರ ಪತ್ನಿಯನ್ನು ನೋಡಲು ಹೋಗಿದ್ದರು. ಪರಮಹಂಸರ ಹೆಸರನ್ನು ಜನರೇನೋ ಹೇಳುತ್ತಾರೆ; ಅವರ ಪತ್ನಿಯನ್ನು ಅವರು ಹೇಗೆ ಕಾಣುತ್ತಾರೆ?''

ನಾನೂ ನಕ್ಕೆ. ಅನಂತರ ಅವರೆಂದರು, ''ನಾಳೆ ಬೆಳಿಗ್ಗೆ ಗಂಗಾಸ್ನಾನ ಮಾಡಿದ ನಂತರ ಒಂದಿಷ್ಟು ಹೂ, ಬಿಲ್ವಪತ್ರೆ, ಹಣ್ಣು, ಸಿಹಿತಿಂಡಿ ಇವನ್ನೆಲ್ಲ ತೆಗೆದುಕೊಂಡು ಹೋಗಿ. ನೀವೊಬ್ಬರೇ ಇರಬೇಕು.'' ಅದನ್ನು ಅವರು ಮೆಲುದನಿಯಿಂದ ಹೇಳಿದ್ದರು, ಗುಟ್ಟಿನ ವಿಷಯವನ್ನು ಹೇಳುವಂತೆ. ''ಯಾರಾದರೂ ಹಿಂಬಾಲಿಸಿ ಬರುವುದನ್ನು ಕಂಡರೆ, ಸುತ್ತಿ ಬಳಸಿ ಹೋಗಿ ಅವರನ್ನು ತಪ್ಪಿಸಿಕೊಂಡು ಹೋಗಿ – ಒಬ್ಬರೇ ಹೋಗಿ'' ಎಂದರು. ಅನಂತರ ಅವರು ಅದ್ವೈತ ಆಶ್ರಮದ ಕಡೆಗೆ ಹೋದರು; ನಾನು ವಿಶ್ವನಾಥ ಮಂದಿರದ ಕಡೆಗೆ ಹೋದೆ.

ಮರುದಿನ ಬೆಳಿಗ್ಗೆ ನಾನು ಗಂಗಾಸ್ನಾನ ಮಾಡಲು ದಶಾಶ್ವಮೇಧ ಘಾಟ್‌ಗೆ ಹೋಗುವ ರಸ್ತೆ ಮರೆತುಹೋಗಿ, ಪ್ರಯಾಗ ಘಾಟ್‌ಗೆ ಬಂದು ತಲುಪಿದೆ. ಎರಡು ವರ್ಷಗಳಿಗೆ ಮುನ್ನ ತೀರಿಕೊಂಡಿದ್ದ, ನನಗೆ ಪರಿಚಯವಿದ್ದ ಸಾಧುಗಳೊಬ್ಬರ ಸ್ಮೃತಿ ಮಂದಿರವೊಂದು ಪ್ರಯಾಗ ಘಾಟ್‌ನಲ್ಲಿದ್ದುದನ್ನು ನಾನು ಕಂಡೆ.

ಆ ಮಂದಿರವನ್ನು ನಾನು ಅನೇಕ ಘಾಟ್‌ಗಳಲ್ಲಿ ಹುಡುಕುತ್ತ ವ್ಯರ್ಥ ಪ್ರಯತ್ನ ಮಾಡುತ್ತಿದ್ದೆ. ಇರಲಿ; ಸ್ನಾನ ಮುಗಿಸಿದ ನಂತರ ನಾನು ದಾರಿಯ ಪಕ್ಕದಿಂದ ಹೂ-ಬಿಲ್ವಪತ್ರೆ, ಒಂದಿಷ್ಟು ಹಣ್ಣುಹಂಪಲು ಹಾಗೂ ಖಾನಾ ಸಿಹಿತಿಂಡಿ ಇವನ್ನು ತೆಗೆದುಕೊಂಡು, 'ಲಕ್ಷ್ಮೀನಿವಾಸ'ದ ಕಡೆಗೆ ಹೊರಟೆ. ದಾರಿಯಲ್ಲಿ ಎಲ್ಲೂ ಪ್ರತಿಕೂಲವಾದ ಅಥವಾ ಅಹಿತಕರ ಘಟನೆ ನಡೆಯಲಿಲ್ಲ. ದೊಡ್ಡ ರಸ್ತೆಯಿಂದ ಗಲ್ಲಿಯತ್ತ ಪ್ರವೇಶ ಮಾಡುತ್ತಿರಬೇಕಾದರೆ ನೋಡಿದೆ – 'ಲಕ್ಷ್ಮೀನಿವಾಸ'ದ ಹೆಬ್ಬಾಗಿಲ ಬಳಿ ಒಬ್ಬಾಕೆ, ಸೆರಗನ್ನು ಮುಖದ ಮೇಲೆ ಅರ್ಧಭಾಗ ಹೊದ್ದುಕೊಂಡು, ಕೆನ್ನೆಯ ಮೇಲೆ ಕೈಯಿಟ್ಟು ನಿಂತಿದ್ದರು. ಇವರೇ ಶ್ರೀಮಾತೆಯಿರಬಹುದೆ? ಎಂದುಕೊಂಡೆ. ಹಿಂದಿನ ದಿನ ಸಂಜೆ ನಡೆದ ವಿಷಯ ನೆನಪಿಗೆ ಬಂತು. ನಿನ್ನೆ ಹಾಗೂ ಈಗ ಇವತ್ತು! ಇಷ್ಟೊಂದು ಸೌಭಾಗ್ಯ ನನ್ನದಾಗುವುದೆ? ದೂರದ ಊರಿಗೆ ಹೋಗಿರುವ ಮಗನ ದಾರಿಯನ್ನೇ ಕಾಯುತ್ತ ನಿಂತಿರುವ ತಾಯಿಯ ಹಾಗೆಯೇ ಅವರು ನಿಂತಿದ್ದರು. ಈ ರೀತಿ ಯೋಚಿಸುತ್ತ, ಕೂಡಲೇ ಶ್ರೀಮಾತೆಯವರ ಬಳಿಗೆ ಹೋಗಿ, ಅವರತ್ತ ನೋಡಿ ಕೇಳಿದೆ:

'' 'ತಾಯಿ' ಅಂದರೆ ನೀವೇ ಏನು?''

''ಹೌದು ಮಗೂ, ನಾನು ನಿನ್ನ ತಾಯಿ.''

''ನನ್ನ ತಾಯಿ!''

''ಹೌದು, ನಾನು ನಿಮ್ಮೆಲ್ಲರ ತಾಯಿ.''

''ನಮ್ಮೆಲ್ಲರ ತಾಯಿ!''

''ಹೌದು ಮಗೂ ನಾನು ಜಗತ್ತಿನ ತಾಯಿ.''


ನಾನು ಮನಸ್ಸಿನಲ್ಲಿ ಯೋಚಿಸಿದೆ– ಅದಕ್ಕೇ ನೀವು ಜಗದಂಬೆಯಿರಬೇಕು. ನಾನು ಅವರಿಗೆ ಪ್ರಣಾಮ ಮಾಡಲು ಹೊರಟಿದ್ದನ್ನು ಕಂಡು ಅವರೆಂದರು: ''ಸ್ವಲ್ಪ ತಡೆ, ಮಗೂ.'' ಬಳಿಕ ಅವರು, ''ಕೃಷ್ಣಲಾಲ್, ಓ ಕೃಷ್ಣಲಾಲ್'' ಎಂದು ಕರೆದರು. ಕೃಷ್ಣಲಾಲ್ ಮಹಾರಾಜರು (ಸ್ವಾಮಿ ಧೀರಾನಂದರು) ಹೊರಗೆ ಬಂದರು. ಅಲ್ಲಿ ನಿಂತಿದ್ದ ನನ್ನನ್ನು ಕಂಡ ಅವರು ಸಂತಸದಿಂದ ನಕ್ಕರು. ಅವರ ಪರಿಚಯ ನನಗಿತ್ತು. ಬೇರೆ ಯಾರಾದರೂ ಭಕ್ತರ ಮೇಲೆ ಶ್ರೀಮಾತೆಯವರ ಕೃಪಾದೃಷ್ಟಿ ಬಿದ್ದುದನ್ನು ಕಂಡಾಗ ಅವರೂ ಆನಂದಗೊಳ್ಳುತ್ತಿದ್ದರು. ಶ್ರೀಮಾತೆಯವರು ಹೇಳಿದರು: ''ಈ ಹುಡುಗನ ಕೈಯಿಂದ ಇದನ್ನೆಲ್ಲ ತೆಗೆದುಕೊಂಡು ಹೋಗಿ ದೇವರ ಕೋಣೆಯಲ್ಲಿಡು. ನಾನು ಗಂಗಾಸ್ನಾನ ಮಾಡಿ ಬಂದು, ಠಾಕೂರರ ಪೂಜೆ ಮಾಡಿ ಅದನ್ನು ನೈವೇದ್ಯ ಮಾಡುತ್ತೇನೆ.''

ಕೃಷ್ಣಲಾಲ್ ಮಹಾರಾಜ್ ಬೇಗನೆ ಪೂಜಾದ್ರವ್ಯಗಳನ್ನೆಲ ದೇವರ ಕೋಣೆಯಲ್ಲಿಟ್ಟು ಬಂದರು. ಒಂದು ಪಾತ್ರೆಯಲ್ಲಿ ಗಂಗಾಜಲವನ್ನು ಅವರು ತಂದಾಗ ಶ್ರೀಮಾತೆ ಹೇಳಿದರು: ''ಹುಡುಗನ ಕೈ ತೊಳೆಸು.'' ಅವರು ಅಂತೆಯೇ ಮಾಡಿದರು. ನಂತರ ನಾನು ಮನಸ್ಸಿಗೆ ತೃಪ್ತಿಯಾಗುವಷ್ಟೂ ಪ್ರಣಾಮ ಮಾಡಿದೆ. ನನ್ನ ಹೃದಯ ಆನಂದದಿಂದ ತುಂಬಿಹೋಯಿತು. ಆದರೆ ನನ್ನ ಮನಸ್ಸಿನ ಮೂಲೆಯಲ್ಲಿ ಒಂದು ಸಂದೇಹ ಉಳಿಯಿತು – ಗಂಗಾಜಲ ಏಕೆ? ಅಪವಿತ್ರನಾದ ನನ್ನನ್ನು ಶ್ರೀಮಾತೆಯವರು ಪವಿತ್ರಗೊಳಿಸಿದರೆ? ನನ್ನ ಮನಸ್ಸಿನ ಆಲೋಚನೆ ಅಂತರ್ಯಾಮಿನಿ ಶ್ರೀಮಾತೆಯವರಿಗೆ ತಿಳಿಯಿತು. ಅವರು ಮೃದುವಾಗಿ ನಕ್ಕು ಹೇಳಿದರು, ''ಠಾಕೂರರ ಪೂಜೆಗೋಸ್ಕರ ನೀನು ಯಾವ ಕೈಯಿಂದ ಆ ವಸ್ತುಗಳನ್ನು ತಂದೆಯೋ, ಅದೇ ಕೈಯಿಂದ ನನ್ನ ಪಾದಗಳನ್ನು ಮುಟ್ಟಬಾರದು ಮಗೂ. ಅದಕ್ಕಾಗಿಯೇ ನಿನ್ನ ಕೈಯನ್ನು ತೊಳೆದದ್ದು.''

ನಾನು ಏನೂ ಉತ್ತರ ನೀಡಲಾರದೆ ಹೋದೆ. ಉಕ್ಕಿಬಂದ ಆನಂದಬಾಷ್ಪಗಳನ್ನು ತಡೆಯುವ ನನ್ನ ಪ್ರಯತ್ನ ವಿಫಲವಾಯಿತು. *(ಮುಂದುವರಿಯುವುದು)*

**ಯುವಚೇತನ**

## ಬಲಶಾಲಿಯಾಗು, ನಿರ್ಭೀತನಾಗು!



'ನಾಯಮಾತ್ಮಾ ಬಲಹೀನೇನ ಲಭ್ಯ.' ಶರೀರದಲ್ಲಿಯೂ ಮನಸ್ಸಿನಲ್ಲಿಯೂ ಬಲವಿಲ್ಲದಿದ್ದರೆ ಆತ್ಮವನ್ನು ಪಡೆಯುವುದಕ್ಕಾಗುವುದಿಲ್ಲ. ಪುಷ್ಟಿಕರವಾದ ಒಳ್ಳೆಯ ಆಹಾರದಿಂದ ಮೊದಲು ಶರೀರವನ್ನು ಬೆಳೆಸಬೇಕು. ಹಾಗಾದರೆ ಮನಸ್ಸು ಬದಲಾಗುತ್ತದೆ. ಮನಸ್ಸು ಶರೀರದ ಸೂಕ್ಷ್ಮಾಂಶ, ಮನಸ್ಸಿನಲ್ಲಿಯೂ ತುಂಬ ಬಲವನ್ನು ತೋರ್ಪಡಿಸಬೇಕು. 'ನಾನು ಹೀನ' 'ನಾನು ಹೀನ' ಎನ್ನುತ್ತ ಎನ್ನುತ್ತ ಮನುಷ್ಯನು ಹೀನನಾಗಿ ಹೋಗುತ್ತಾನೆ .

ಯಾರು ತಾನು ಬದ್ಧ ಎಂಬ ಅಭಿಮಾನವನ್ನು ಬಿಟ್ಟು ಸದಾ ಜಾಗರೂಕನಾಗಿರುತ್ತಾನೆಯೋ ಅವನು ಮುಕ್ತನಾಗಿಯೇ ಬಿಡುತ್ತಾನೆ; ಯಾರು ತಾನು ಬದ್ಧನೆಂದು ಭಾವಿಸಿಕೊಳ್ಳುತ್ತಾನೆಯೋ ಅವನಿಗೆ ಜನ್ಮ ಜನ್ಮದಲ್ಲಿಯೂ ಬದ್ಧ ದೆಸೆಯೆ; ತಿಳಿದುಕೊ, ಐಹಿಕ ಪಾರಮಾರ್ಥಿಕ ಇವೆರಡು ವಿಚಾರಗಳಲ್ಲಿಯೂ ಈ ಮಾತು ನಿಜವೆಂದು ತಿಳಿ. ಇಹ ಜೀವನದಲ್ಲಿ ಯಾರು ಸರ್ವದಾ ಹತಾಶರೋ ಅವರಿಂದ ಯಾವ ಕೆಲಸವೂ ಸಾಗುವುದಿಲ್ಲ ; ಅವರು ಜನ್ಮಜನ್ಮದಲ್ಲಿಯೂ ಗೋಳಾಡುತ್ತ ಬರುತ್ತಾರೆ ಹೋಗುತ್ತಾರೆ. 'ವೀರ ಭೋಗ್ಯಾ ವಸುಂಧರಾ' – ವೀರನೇ ವಸುಂಧರೆಯನ್ನು ಅನುಭವಿಸುವವನು; ಈ ಮಾತು ಖಂಡಿತವಾಗಿಯೂ ಸತ್ಯ. ವೀರನಾಗು – ಸರ್ವದಾ 'ಅಭೀಃ' 'ಅಭೀಃ' ಎಂದು ಹೇಳು.

*(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂ.೮, ಪು. ೧೧೪–೧೫)*